**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಟಿ.ಎನ್.ಜವರಾಯಿಗೌಡ ಇವರು ನಿಯಮ 72 ರಡಿ ಮಂಡಿಸಿರುವ ಸೂಚನೆಗೆ ಸರ್ಕಾರದ ಹೇಳಿಕೆ:**

**ಸೂಚನೆ:**

ತಿಪ್ಪಗೊಂಡನಹಳ್ಳಿ ಜಲಾನಯನ ಪ್ರದೇಶ ವ್ಯಾಪ್ತಿಗೆ ಬರುವ ಬಾರಗೇನಹಳ್ಳಿ ಸುತ್ತಮುತ್ತಲ ಕಂದಾಯ ಇಲಾಖೆಗೆ ಸೇರಿದ ಗೋಮಾಳ ಭೂಮಿಯಲ್ಲಿ ಮತ್ತು ಹೊರೈಜೂನ್ ಎಂಡಸ್ಟ್ರಿಯಲ್ ಕಂಪನಿ ಕಾನೂನು ಬಾಹಿರವಾಗಿ ನಡೆಸುತ್ತಿರುವ ಬಂಡೆಗಳ ಸ್ಫೂಟ ಮತ್ತು ಕ್ರಷರ್ ಚಟುವಟಿಕೆಗಳನ್ನು ಸ್ಥಗಿತಗೊಳಿಸಲು ಹೈಕೋರ್ಟ್ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಿರುವ ಕುರಿತು ದಿನಾಂಕ: 8-8-2025ರ ವಿಜಯ ಕರ್ನಾಟಕ ಪತ್ರಿಕೆಯಲ್ಲಿ ವರದಿಯಾಗಿದೆ. ಬಾರಗೇನಹಳ್ಳಿ ವ್ಯಾಪ್ತಿಯ ಕೆ.ಐ.ಎ.ಡಿ.ಬಿ. ವಲಯದಲ್ಲಿ ಹೊರೈಜೂನ್ ಇಂಡಸ್ಟ್ರಿಯಲ್ ಹೈ ಪಾರ್ಕ್ ಕಂಪನಿ ಸುಮಾರು 125 ಎಕರೆ ವಿಸ್ತೀರ್ಣದ ಪ್ರದೇಶದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ನಡೆಸುತ್ತಿದೆ. ಈ ಕಂಪನಿಗೆ ಸೇರಿದ ಸುಮಾರು 20 ಎಕರೆಯಲ್ಲಿ ಬಂಡೆಗಳಿದ್ದು, ಒಂದು ಬೃಹತ್ ಬಂಡೆಕಲ್ಲು ಸರ್ಕಾರಕ್ಕೆ ಸೇರಿದ್ದಾಗಿದೆ. ಆದರೆ ಈ ಕಂಪನಿಯವರು ಯಾವ ಸಕ್ಷಮ ಪ್ರಾಧಿಕಾರಗಳಿಂದ ಅನುಮತಿ ಪಡೆಯದೆ ನಿರಾಕ್ಷೇಪಣಾ ಪತ್ರ ಪಡೆಯದೆ ಈ ಬಂಡೆ ಕಲ್ಲನ್ನು ಬ್ಲಾಸ್ಟಿಂಗ ಮತ್ತು ಡ್ರಿಲಿಂಗ್ ಮಾಡುತ್ತಿದ್ದಾರೆ. ಮೊಬೈಲ್ ಕ್ರಷರ್ ಘಟಕವನ್ನು ಸ್ಥಾಪಿಸಲಾಗಿದೆ.. ಜಿಲ್ಲಾಧಿಕಾರಿಗಳು. ಗಣಿ ಇಲಾಖೆ ವಾಯು ಮಾಲಿನ್ಯ ಮಂಡಳಿ ಅಧಿಕಾರಿಗಳಿಗೆ ಈ ವಿಷಯ ಗೊತ್ತಿದ್ದರೂ ಸಹ ಆ ಕಂಪನಿಯ ಜತೆಗೆ ಸೇರಿ ಅವ್ಯವಹಾರದಲ್ಲಿ ತೊಡಗಿರುವ ಬಗ್ಗೆ ಸಾರ್ವಜನಿಕರ ವಲಯದಲ್ಲಿ ಸುದ್ದಿಯಾಗಿದೆ. ಈ ಜಲಾನಯನಕ್ಕೆ ಒಳಪಡುವ ಪ್ರದೇಶದಲ್ಲಿ ನಡೆಯುತ್ತಿರುವ ಚಟುವಟಿಕೆಯಿಂದ ಸ್ಥಳೀಯ ಪರಿಸರ, ಸಾರ್ವಜನಿಕರು ಸೇರಿ, ಸಕಲ ಜೀವ ಸಂಕುಲಕ್ಕೆ ಅಪಾಯ ಎದುರಾಗಿದೆ. ಈ ಅಕ್ರಮ ಚಟುವಟಿಕೆಯಿಂದ ಸುತ್ತ ಮುತ್ತಲಿನ ಪ್ರದೇಶಗಳ ಜಲಧಾರೆ, ರಾಜಕಾಲುವೆ. ನಾಲೆಗಳು ಹಾಗೂ ಗೋಮಾಳ ಜಮೀನುಗಳ ಫಲವತ್ತತೆ ನಶಿಸಿ ಹೋಗುವ ಜತೆಗೆ ವಾಯು ಮಾಲಿನ್ಯ ಆವರಸಿದೆ. ಜಾನುವಾರುಗಳ ಮೇವಿಗೂ ಸಮಸ್ಯೆಯಾಗಿದೆ. ಆದ್ದರಿಂದ ಕೂಡಲೇ ಈ ಚಟುವಟಿಕಗಳನ್ನು ಸ್ಥಗಿತಗೊಳಿಸಲು ಸರ್ಕಾರ ಕ್ರಮ ತೆಗೆದುಕೊಳ್ಳಬೇಕು ಹಾಗೂ ಬಾರಗೇನಹಳ್ಳಿ ವ್ಯಾಪ್ತಿಯ ಕೆ.ಐ.ಎ.ಡಿ.ಬಿ. ವಲಯದಲ್ಲಿ ಬರುವ ಹೊರೈಜೂನ್ ಇಂಡಸ್ಟ್ರಿಯಲ್ ಕಂಪನಿಯ ಈ 125 ಎಕರೆ ಗೋಮಾಳ ಜಮೀನನ್ನು ಕೂಡಲೇ ಸರ್ಕಾರದ ವಶಕ್ಕೆ ತೆಗೆದುಕೊಳ್ಳಬೇಕು ಎಂದು ಮಾನ್ಯ ಕಂದಾಯ ಸಚಿವರ ಗಮನ ಸೆಳೆಯುತ್ತೇನೆ.

**ಹೇಳಿಕೆ:**

ತಿಪ್ಪಗೊಂಡನಹಳ್ಳಿ ಜಲಾನಯನ ಪ್ರದೇಶ ವ್ಯಾಪ್ತಿಗೆ ಬರುವ ಬರಗೇನಹಳ್ಳಿ ಸುತ್ತಮುತ್ತಲ ಕಂದಾಯ ಇಲಾಖೆಗೆ ಸೇರಿದ ಗೋಮಾಳ ಭೂಮಿಯಲ್ಲಿ ಮತ್ತು ಹೊರೈಜೂನ್ ಎಂಡಸ್ಟ್ರಿಯಲ್ ಕಂಪನಿ ಕಾನೂನು ಬಾಹಿರವಾಗಿ ನಡೆಸುತ್ತಿರುವ ಬಂಡೆಗಳ ಸ್ಫೋಟ ಮತ್ತು ಕ್ರಷರ್ ಚಟುವಟಿಕೆಗಳನ್ನು ಸ್ಥಗಿತಗೊಳಿಸಲು ಹೈಕೋರ್ಟ್ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸುವ ಕುರಿತು ದಿನಾಂಕ:08-08-2025 ರ ವಿಜಯ ಕರ್ನಾಟಕ ಪತ್ರಿಕೆಯಲ್ಲಿ ವರದಿಯಾಗಿರುತ್ತದೆ.

ಈ ಬಗ್ಗೆ ಮಾನ್ಯ ಘನ ಉಚ್ಛನ್ಯಾಯಲದ WP No:23333/2025(PIL) ರಂತೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ದಾಖಲಾಗಿದ್ದು ಸದರಿ ಪ್ರಕರಣದ ವಿಚಾರಣೆಯು ದಿನಾಂಕ:29-10-2025 ನಿಗದಿಪಡಿಸಲಾಗಿರುತ್ತದೆ.

ಕೆ.ಐ.ಎ.ಡಿ.ಬಿ ರವರು ರಚಿಸಿರುವ ಕೈಗಾರಿಕೆ ಪ್ರದೇಶದಲ್ಲಿ ಮೆ|| ಎಂಬಸ್ಸಿ ಇಂಡಸ್ಟ್ರೀಯಲ್ ಪಾರ್ಕ್ ಪ್ರೈ ಲಿ ರವರಿಗೆ ನಕ್ಷೆಯಲ್ಲಿ ತೋರಿಸಿರುವಂತೆ ಸುಮಾರು 124.21 ಎಕರೆಯಷ್ಟು ಜಾಗದ ಸ್ವಾಧೀನವನ್ನು ನೀಡಿದ್ದು ಪರಿಶೀಲಿಸಲಾಗಿ ಈ ಪೈಕಿ, ಸುಮಾರು 7-00 ಎಕರೆ ಪ್ರದೇಶವು ಕಲ್ಲುಬಂಡೆಯಿಂದ ಕೂಡಿರುತ್ತದೆ , ಸದರಿ 7-ಎಕರೆ ಪ್ರದೇಶದಲ್ಲಿ ಕಾಮಗಾರಿ ನಡೆಯುವ ಸಂದರ್ಭದಲ್ಲಿ ದೊರೆಯುವಂತಹ ಕಲ್ಲು ಬಂಡೆಯನ್ನು ಅಲ್ಪ/ನಿಯಂತ್ರಿತ ಪ್ರಮಾಣದ ಕಂಟ್ರೋಲ್ ಬ್ಲಾಸ್ಟಿಂಗ್‌ನ್ನು ಎಕ್ಸೆಲ್ ರೀತಿಯಲ್ಲಿ ಬಳಸಲು ಸ್ಫೋಟಕ ಕಾಯ್ದೆ 1884ರ ನಿಯಮ 2008ರನ್ವಯ ಮೇ|| ಎಂಬೆಸ್ಸಿ ಇಂಡಸ್ಟ್ರೀಯಲ್ ಪಾರ್ಕ್ ಪ್ರೈ.ಲಿ., ರವರಿಗೆ ಷರತ್ತುಗಳನ್ನು ವಿಧಿಸಿ ಜಿಲ್ಲಾಧಿಕಾರಿ ಕಛೇರಿಯ ಅಧಿಕೃತ ಜ್ಞಾಪನ ಸಂ.BRDC-JUDI/52/2025-MSCQL, ದಿನಾಂಕ 13.05.2025 ರಂತೆ ಮುಂದಿನ ಆರು ತಿಂಗಳ ಅವಧಿಗೆ ಸಕ್ಷಮ ಪ್ರಾಧಿಕಾರಗಳಾದ ಪೊಲೀಸ್ ಅಧೀಕ್ಷಕರು, ಮುಖ್ಯ ಅಗ್ನಿಶಾಮಕ ಅಧಿಕಾರಿಗಳು, ಉಪನಿರ್ದೇಶಕರು ಗಣಿ ಮತ್ತು ಭೂವಿಜ್ಞಾನ ಇಲಾಖೆ, ತಹಶೀಲ್ದಾರ್, ಪರಿಸರ ಅಧಿಕಾರಿ, ಕಾರ್ಯನಿರ್ವಾಹಕ ಅಧಿಕಾರಿ ರವರಿಂದ ಅಭಿಪ್ರಾಯ ಪಡೆದು ಆದೇಶಿಸಲಾಗಿರುತ್ತದೆ.

ಮುಂದುವರೆದು ನೆಲಮಂಗಲ ತಾಲ್ಲೂಕು, ಬರಗೇನಹಳ್ಳಿ ಗ್ರಾಮದ ಸ.ನಂ.19/1 ರಲ್ಲಿ ಒಟ್ಟು 2-00 ಎಕರೆ ಜಮೀನಿನಲ್ಲಿ ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ (ಕ್ರಷರ್)ಲೈಸನ್ಸ್ ನಿಯಂತ್ರಣ ಅಧಿನಿಯಮ 2011ರ ತಿದ್ದುಪಡಿ ನಿಯಮಾವಳಿ 2013 ಮತ್ತು 2020ರ ಸೆಕ್ಷನ್ 7 ರಡಿಯಲ್ಲಿ ಪ್ರತ್ಯಾಯೋಜಿಸಿರುವ ವಿಶೇಷ ಅಧಿಕಾರದಡಿಯಲ್ಲಿ ತಾತ್ಕಲಿಕವಾಗಿ ಮೊಬೈಲ್ ಕ್ರಷರ್ ನಡೆಸಲು ಒಂದು ವರ್ಷದ ಅವಧಿಗೆ ಕಾರ್ಯಾನುಮತಿ ಆದೇಶವನ್ನು ಸಕ್ಷಮ ಪ್ರಧಿಕಾರಿಗಳಾದ, ಉಪವಿಭಾಗಾಧಿಕಾರಿ, ದೊಡ್ಡಬಳ್ಳಾಪುರ ಉಪವಿಭಾಗ, ವಲಯ ಅರಣ್ಯಾಧಿಕಾರಿ, ಉಪನಿರ್ದೇಶಕರು ಗಣಿ ಮತ್ತು ಭೂವಿಜ್ಞಾನ ಇಲಾಖೆ, ಪರಿಸರ ಅಧಿಕಾರಿ, ರವರಿಂದ ಅಭಿಪ್ರಾಯ ಪಡೆದು ಅನುಮತಿ ನೀಡಲಾಗಿರುತ್ತದೆ.

ಪ್ರಸ್ತಾಪಿತ ಪ್ರದೇಶವು ತಿಪ್ಪಗೊಂಡನಹಳ್ಳಿ ಜಲಾನಯನ ಪ್ರದೇಶದ ವ್ಯಾಪ್ತಿಯೊಳಗೆ ಬರುವುದಿಲ್ಲವೆಂದು ಉಪವಿಭಾಗಾಧಿಕಾರಿ, ದೊಡ್ಡಬಳ್ಳಾಪುರ ಉಪವಿಭಾಗ, ವಲಯ ಅರಣ್ಯಾಧಿಕಾರಿ, ಉಪನಿರ್ದೇಶಕರು ಗಣಿ ಮತ್ತು ಭೂವಿಜ್ಞಾನ ಇಲಾಖೆ, ಪರಿಸರ ಅಧಿಕಾರಿ, ರವರು ನಡೆಸಿರುವ ಜಂಟಿ ಪರಿಶೀಲನಾ ವರದಿಯಲ್ಲಿ ತಿಳಿಸಿದ್ದು, ಈ ಚಟುವಟಿಕೆಯಿಂದ ಸ್ಥಳೀಯ ಪರಿಸರ, ಸಾರ್ವಜನಿಕರು ಸೇರಿ, ಸಕಲ ಜೀವ ಸಂಕುಲಕ್ಕೆ ಅಪಾಯ ಎದುರಾಗಿರುವು , ಸುತ್ತ ಮುತ್ತಲಿನ ಪ್ರದೇಶಗಳ ಜಲಧಾರೆ, ರಾಜಕಾಲುವೆ. ನಾಲೆಗಳು ಹಾಗೂ ಗೋಮಾಳ ಜಮೀನುಗಳ ಫಲವತ್ತತೆ ನಶಿಸಿರುವುದು ಹಾಗೂ ವಾಯು ಮಾಲಿನ್ಯ ಆವರಸಿರುವುದು ಕಂಡುಬಂದಿರುವುದಿಲ್ಲ.

ಕೆಐಎಡಿಬಿ ರವರು ದಿನಾಂಕ:28-03-2025 ರಂದು ವೇರ್‌ಹೌಸ್‌ನಿರ್ಮಾಣ ಮಾಡಲು ಪತ್ರ ಸಂ:ಡಿಒ ಕೆಐಎಡಿಬಿ/89/2324/ಬಿಪಿ ರಂತೆ ಅನುಮತಿ ನೀಡಲಾಗಿರುತ್ತದೆ ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ  ಪರಿಸರ ತೀರುವಳಿ(CFO) ಪತ್ರವನ್ನು ದಿನಾಂಕ:25-06-2024 ರಂದು ಅನುಮತಿ ಪಡೆದಿರುವ 7-00 ಎಕರೆ ಜಮೀನಿನ ಪೈಕಿ ಸುಮಾರ 4-00 ಎಕರೆ ಜಮೀನಿನಲ್ಲಿ ಮಾತ್ರ ಸುಮಾರು 3 ರಿಂದ 4 ಅಡಿಗಳಷ್ಟು ಮಾತ್ರ ಬಂಡೆತೆಗೆದಿರುತ್ತಾರೆ. ಸದರಿ ಕಲ್ಲು ಬಂಡೆಯ ಚೂರುಗಳನ್ನು ಹೊಡೆದು ಬೇರೆಯವರಿಗೆ ಮಾರಾಟ ಮಾಡದೆ ಬೇರೆ ಕಡೆಗೆ ಸ್ಥಳಾಂತರಿಸದೆ ತಮ್ಮ ಆಂತರಿಕಾ ಕಟ್ಟಡ ಕಟ್ಟಲು ಕಲ್ಲುಗಳನ್ನು ಬಳಸುತ್ತಿರುತ್ತಾರೆ, ಪ್ರಸ್ತಾಪಿತ ಪ್ರದೇಶದಲ್ಲಿ ಯಾವುದೇ ಅಕ್ರಮ ಗಣಿಗಾರಿಕೆ ನಡೆಯುತ್ತಿರುವುದು ಹಾಗೂ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಕಂಡುಬಂದಿರುವುದಿಲ್ಲ.

ಕೆಐಎಡಿಬಿ ವತಿಯಿಂದ ಮೆ|| ಎಂಬಸ್ಸಿ ಇಂಡಸ್ಟ್ರೀಯಲ್ ಪಾರ್ಕ್ ಪ್ರೈ ಲಿ ರವರಿಗೆ ದಿನಾಂಕ.06-03-2023ರಂದು ಒಟ್ಟು 124-21 ಎ/ಗು ಪ್ರದೇಶದ ಸ್ವಾಧೀನವನ್ನು ಹಸ್ತಾಂತರ ಮಾಡಿದ್ದು, ಈ ಪೈಕಿ ಬರಗೇನಹಳ್ಳಿ ಗ್ರಾಮದ ಸ.ನಂ.17ರಲ್ಲಿ 19-11 ಎ/ಗು ಹಾಗೂ ಸ.ನಂ.15ರಲ್ಲಿ 12-05 ಎ/ಗು ಗೋಮಾಳದ ಜಮೀನಾಗಿರುತ್ತದೆ. ಹಾಗೂ ಉಳಿಕೆ  93-05 ಎ/ಗು ಪ್ರದೇಶವು ಹಿಡುವಳಿ ಜಮೀನಾಗಿದ್ದು, ಕಲ್ಲುಬಂಡೆಗಳಿಂದ ಕೂಡಿರುವ ಪ್ರದೇಶವು ಹಿಡುವಳಿ ಜಮೀನಾಗಿರುತ್ತದೆ.

ಆರ್‌ಡಿ 136 ಎಲ್‌ಜಿಕ್ಯೂ 2025

(ಕೃಷ್ಣ ಬೈರೇಗೌಡ)

ಕಂದಾಯ ಸಚಿವರು.